# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶ್ರೀದೇವಿ ತ್ರಿಕಣ್ಣೇಶ್ವರಿ ಮಹಾತ್ಮೆ

ಕವಿ

## ಅಗರಿ ಭಾಸ್ಕರ ರಾವ್

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ :**

ಪೌರಾಣಿಕ

**ಆಧಾರ ಗ್ರಂಥ :**

ಶಿವಪುರಾಣ ಮತ್ತು ದೇವೀ ಭಾಗವತ

**ಭಾಷೆ :**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ :**

ಹೇರಂಜೆ ಕೃಷ್ಣ ಭಟ್ಟ, ಸೇವಧಿ ಪ್ರಕಾಶನ

**ಹಕ್ಕುಸ್ವಾಮ್ಯ ವಿವರ :**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೭೩

**ಪಾತ್ರಗಳು :**

ಬ್ರಹ್ಮ, ವಿಷ್ಣು, ಅರ್ಧನಾರೀಶ್ವರೀ ದೇವಿ, ಲಕ್ಷ್ಮಿ, ಹಯಗ್ರೀವ ರಕ್ಕಸ, ಶುಕ್ರಾಚಾರ್ಯ, ಶ್ರೀದೇವಿ, ಭಾನುಕಾಸುರ, ಖಂಡಕಾಸುರ, ಚಂದ್ರಮತಿ, ಗೆದ್ದಲು ಹುಳು, ಹಯಗ್ರೀವ ದೇವ, ದೇವೇಂದ್ರ, ಅಗ್ನಿ, ವರುಣ, ತ್ವಷ್ಟ್ರ ಬ್ರಹ್ಮ, ಚಾರಕರು

**ಕಥಾ ಸಾರಾಂಶ :**

ಬ್ರಹ್ಮ ವಿಷ್ಣುವಿನ ಮಧ್ಯೆ ತಮ್ಮಿಬ್ಬರಲ್ಲಿ ಯಾರು ಮೇಲು ಎಂಬ ಜಗಳ. ಜಗದಾಂಬೆಯು ಬ್ರಹ್ಮಾಂಡವನ್ನು ಮೀರಿದ ಕಂಬವನ್ನು ಮಧ್ಯ ನಿಲ್ಲಿಸಿದಾಗ ಅದರ ಆದಿ ಅಂತ್ಯವನ್ನರಿಯದೇ ದೇವಿಯ ಪ್ರಾರ್ಥನೆ. ಅರ್ಧನಾರೀಶ್ವರಿಯಾಗಿ ದರ್ಶನ, ಅನುಗ್ರಹ. ಅಲಂಕೃತಳಾಗಿ ಬಂದ ಲಕ್ಷ್ಮಿಯನ್ನು ವಿಷ್ಣು ಗಮನಿಸದೇ ಇದ್ದಾಗ ತಲೆ ತುಂಡಾಗಲಿ ಎಂದು ಲಕ್ಷ್ಮಿಯ ಶಾಪ. ಅವಳಲ್ಲಿಯ ಕ್ರೋಧವನ್ನು ವಿಷ್ಣು ಬಿಡಿಸುವುದು. ಲಕ್ಷ್ಮಿಯ ಪಶ್ಚಾತ್ತಾಪ. ಶೋಣಿತಾಪುರದ ಹಯಗ್ರೀವ ದೈತ್ಯನಿಗೆ ಕುದುರೆಯ ಮುಖದವನಿಂದ ಮಾತ್ರ ಮರಣ ಎಂದು ದೇವಿಯ ವರ. ದೇವಲೋಕಕ್ಕೆ ಧಾಳಿ, ಯುದ್ಧ. ದೇವೇಂದ್ರನ ಸೋಲು, ಪಲಾಯನ. ಮಯನ ಮಗಳು ಚಂದ್ರಮತಿಯ ವನವಿಹಾರ. ಹಯಗ್ರೀವನ ಭೇಟಿ, ಪ್ರೇಮಯಾಚನೆ, ಮದುವೆ. ದೇವೇಂದ್ರನಿಂದ ಬ್ರಹ್ಮನಿಗೆ ದೂರು. ವಿಷ್ಣುವಲ್ಲಿಗೆ ಬರಲು ಅವನು ಹೆದೆಯೇರಿಸಿದ ಧನುವಿಗೆ ಶಿರವಿರಿಸಿ ಯೋಗನಿದ್ರೆಯಲ್ಲಿದ್ದುದರಿಂದ ಬ್ರಹ್ಮನು ಗೆದ್ದಲು ಹುಳುವನ್ನು ಸೃಷ್ಟಿಸಿ ಬಿಲ್ಲನ್ನು ಕೊರೆಸಲು ವಿಷ್ಣುವಿನ ಶಿರ ತುಂಡಾಗುವುದು. ಹಯದ ಶಿರ ಜೋಡಿಸಲು ದೇವಿಯ ಆದೇಶ. ಅವನಿಂದ ಹಯಗ್ರೀವ ದೈತ್ಯನ ಸಂಹಾರ. ಮಂಗಲ.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಕವಿಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಮತ್ತು ಯಕ್ಷವಾಹಿನಿಯ ಯಕ್ಷಪ್ರಸಂಗಯಾದಿ)**

ಅಗರಿ ಭಾಸ್ಕರ ರಾಯರು (ಜನನ 1948) ಭಾಗವತರಾದ ಅಗರಿ ಶ್ರೀನಿವಾಸ ರಾಯರ ಮಗ, ತಾಯಿ ರುಕ್ಮಿಣಿ, ಪತ್ನಿ ಜಲಜಾಕ್ಷಿ. ಸ್ವತಃ ಭಾಗವತರೂ ಹೌದು. ಸುಮಾರು ಮೂವತ್ತಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿದ್ದಾರೆ. ಕೆಲವು ಹಸ್ತಪ್ರತಿಗಳು ಅವರಲ್ಲೂ ಲಭ್ಯವಿಲ್ಲ. ಇವರ ಗುಂಡಬಾಳ ಕ್ಷೇತ್ರ ಮಹಾತ್ಮೆ ಅತ್ಯಂತ ಹೆಚ್ಚು ಪ್ರದರ್ಶನ ಕಂಡಿದೆ. ಸುರತ್ಕಲ್ ಮೇಳ, ಧರ್ಮಸ್ಥಳ ಮೇಳಗಳಲ್ಲಿ ಇವರ ಪ್ರಸಂಗಗಳು ಪ್ರದರ್ಶನಗೊಂಡಿವೆ. ಸುಂದರ ಸರಳ ಪದ್ಯಗಳನ್ನು ರಚಿಸಿದ್ದಾರೆ. ತುಳುವಿನಲ್ಲೂ ಪ್ರಸಂಗಗಳನ್ನು ರಚಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಂಗಾರವರ್ಮ ಕಾಳಗ, ಅಗಸ್ತ್ಯ ಮಹರ್ಷಿ, ಏಕಾದಶಿ ಮಹಾತ್ಮೆ, ಗುಂಡಬಾಳ ಕ್ಷೇತ್ರಮಹಾತ್ಮೆ, ತಪಸ್ವೀ ಮಹೇಂದ್ರ, ದಶಮಗ್ರಹ ವಿಜಯ (ವೀರ ರಾಣಿ ಅಪ್ರಮೇಯಿ), ಧರ್ಮವಿಜಯ (ಮನಮೆಚ್ಚಿದ ಮಡದಿ), ನಾಗಚಂದ್ರಿಕಾ (ಷಡ್ಜನ್ಮ ಮೋಕ್ಷ), ನಾಡಕೇದಗೆ, ನ್ಯಾಯ ಕೀರ್ತಿ ವಿಜಯ, ಪೆರ್ಡೂರು ಕ್ಷೇತ್ರಮಹಾತ್ಮೆ, ಬಗ್ಗು ಪಂಜುರ್ಲಿ ಪ್ರತಾಪ, ಬರ್ಬರೀಕ ಪ್ರತಾಪ, ಭಕ್ತ ಪ್ರಹ್ಲಾದ, ಭಸ್ಮಾಸುರ ಕಾಳಗ, ರುದ್ರಾಂತರ್ಗತ ಲಕ್ಷ್ಮೀನರಸಿಂಹ, ಶ್ರೀಕದ್ರಿ ಕ್ಷೇತ್ರಮಹಾತ್ಮೆ, ಶ್ರೀದೇವಿ ತ್ರಿಕರ್ಣೇಶ್ವರಿ ಮಹಾತ್ಮೆ, ಶ್ರೀರಾಘವೇಂದ್ರಮಹಾತ್ಮೆ (ಶ್ರೀ ಮಂತ್ರಾಲಯ ಮಹಾತ್ಮೆ), ಶ್ರೀವಾಣೀ ವಿಲಾಸ, ಶ್ರೀಹರಿ ಲೀಲಾರ್ಣವ, ಶ್ರೀವಿಶ್ವಕರ್ಮಮಹಾತ್ಮೆ, ಸಮುದ್ರ ಮಥನ, ಸುಂದೋಪಸುಂದ ಕಾಳಗ, ಹಯಗ್ರೀವ ದೇವೋದ್ಭವ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತವೃತ್ತ**
ಶ್ರೀಚಕ್ರೇ ಸ್ಥಿರವಾಸಿನೀ ಗುಣಮಣೀ ಸದ್ಭಕ್ತರಕ್ಷಾಮಣೀ |
ಮಾರಾರೀ ಹೃದಯೇಶ್ವರೀ ಸುಚರಿತೇ ತ್ರೈಲೋಕಚಿಂತಾಮಣೀ ||
ಬಾಧಾರಿಷ್ಟ ನಿವಾರಿಣೀ ಮತಿಯುತೇ ಕಲ್ಯಾಣ ಕಲ್ಪದ್ರುಮೇ |
ಲೇಸನ್ನೀಯೆ ಸದಾ ಹೊದ್ರಾಳಿ ನಿಲಯೇ ದೇವೀ ನಮೋಸ್ತ್ವಂಬಿಕೇ || ೧ || [೧]

**ವಾರ್ಧಕ**
ಹೇರಂಬನಡಿಗೆರಗಿ ಮಾರಾರಿಯನು ನುತಿಸಿ |
ಶಾರದಾಂಬೆಯ ದಿವ್ಯಚರಣಕಾನತನಾಗಿ |
ಧಾರುಣಿಯ ಕವಿವರ್ಯ ವಿದ್ವಾಂಸರನೆ ನೆನೆದು ಹೊದ್ರಾಳಿ ಪುರದಿ ನಿಂತಾ ||
ಚಾರು ಜಗದಂಬೆ ಲೀಲಾಮೃತದ ಕಥೆಯನ್ನು |
ತೋರಿದಂತೆಯೆ ಮತಿಗೆ ಯಕ್ಷಗಾನದಿ ಬರೆದೆ |
ಧಾರಿಣೀಸುರ ಅಗರಿ ಭಾಸ್ಕರನು ನಾನೀಗ ಶ್ರೀದೇವಿ ಕರುಣದಿಂದಾ || ೧ || [೨]

**ಸೌರಾಷ್ಟ್ರ - ತ್ರಿವುಡೆ**
ಆದಿಮಾಯೆಯ ನೇಮದಂದದಿ |
ವೇದಬಿಜ್ಜೆಗ ಸೃಷ್ಟಿಕಾರ್ಯವ |
ಮೋದದೊಳು ಪ್ರಾರಂಭಿಸಲು ಸಲೆ | ಆ ದಿನದೊಳು || ೧ ||

ಪಂಚಭೂತವನಾಧರಿಸಿಯೆ ವಿ |
ರಿಂಚ ನರಮೃಗ ಪಕ್ಷಿಕೀಟವ |
ಸಂಚಯಿತಫಲದಂತೆ ನಿರ್ಮಿಸೆ | ಸಂತಸದೊಳು || ೨ ||

ಪುಟ್ಟಿದವು ಸಚರಾಚರಗಳಾ |
ಸೃಷ್ಟಿಕರ್ತನ ಮಹಿಮೆಯಿಂದಲೆ |
ನಿಷ್ಠೆಯಿಂದಲಿ ನಡೆಯಿತವನಾ | ಸೃಷ್ಟಿಕಾರ್ಯ || ೩ ||

ಆದರೇನಾ ದಿನದಿ ಬ್ರಹ್ಮಗೆ |
ಹಾದಿ ದುರ್ಗಮ ಏಕತಾನತೆ |
ಬಾಧಿಸಲು ಕಳವಳಿಸೆ ಮನದೊಳು | ಆ ವಿಧಾತ || ೪ || [೬]

**ಭಾಮಿನಿ**
ಕಾಣದೆಯೆ ವೈವಿಧ್ಯವನ್ನಾ |
ವಾಣಿರಮಣನು ಬಳಿಕ ಯೋಚಿಸಿ |
ಕ್ಷೋಣಿಯೊಳು ಸಂವೃದ್ಧಿ ಸಂಪದ ತುಂಬಿ ತುಳುಕಲಿಕೆ ||
ಏನು ಯತ್ನವದೆನುತ ಹರಿಯೊಳು |
ಸಾನುರಾಗದಿ ಕೇಳ್ವೆನೆನ್ನುತ |
ಮಾನನಿಧಿ ವೈಕುಂಠಲೋಕಕೆ ತಾನೆ ಬಂದಾ || ೧ || [೭]

**ಕೇದಾರಗೌಳ - ಅಷ್ಟ**
ಭಕ್ತವತ್ಸಲ ವರ | ಸತ್ವಗುಣೋಪೇತ |
ನಿತ್ಯಮಂಗಲದಾಯಕ ||
ಉತ್ತಮ ವೈಕುಂಠ | ಪಟ್ಟಣದೊಳಗಿರೆ |
ಭಕ್ತಜನೋದ್ಧಾರಕ || ೧ ||

ಮೇದಿನಿಯೊಳು ಬಂದ | ಏಕತಾನತೆ ಭಯ |
ಬಾಧಿಸುತಿರೆ ಶ್ರೀಹರಿ ||
ಹಾದಿಯೇನಿದಕೆಂದು | ಯೋಚಿಸುತಿರಲು ರ |
ಮಾಧವ ದಾನವಾರಿ || ೨ ||

ವಾಣೀರಮಣನಿಲ್ಲಿ | ಬರುತಿಹ ಪರಿಹಾರ |
ಏನೆಂಬ ಬಗೆಗಾಗಿಯೆ ||
ಮಾನವಾಂತನ ಸತ್ಯ | ಏನೆಂದು ನೋಳ್ಪರೆ |
ಶ್ರೀಹರಿ ತಡಮಾಡದೆ || ೩ ||

ಆದಿಶೇಷನ ಮೇಲೆ | ಆದಿನಾರಾಯಣ |
ಮೋದದಿ ಮಲಗಿರಲು ||
ವೇದಬಿಜ್ಜೆಗ ಬಂದ | ಪರಿಯನರಿಯದಂತೆ |
ಮಾಧವ ಪವಡಿಸಲು || ೪ ||

ಬಂದಾ ಬ್ರಹ್ಮನು ಕಂಡ | ಸಿಂಧುಶಯನನ ತಾ |
ನಂದದಿ ಮಲಗಿಪ್ಪನಾ ||
ಒಂದೂ ಚಿಂತೆಯದಿಲ್ಲ | ಮಂದಮತಿಗೆಯೆನು |
ತಂದು ತಾ ಕನಲಿದರೆ || ೫ || [೧೨]

**ಭೈರವಿ - ಏಕ**
ಬಂದಿತೆ ನಿದ್ರೆಯು ನಿನಗೇ | ವ |
ಸುಂಧರೆ ಬಳಲಲು ಹೀಗೆ ||
ಚಂದದಿ ಪಾಲಿಪ ಹೊಣೆಯು | ಇರೆ |
ಚಂದವೆ ಮಲಗಿದ ಪರಿಯು || ೧ ||

ಸೃಷ್ಟಿಜನಕ ನಾನಿರುವೆ | ಪರ |
ಮೇಷ್ಠಿಯ ಬಿರುದಾಂತಿರುವೆ ||
ಇಷ್ಟದಿ ಬಂದಿರೆ ಬಳಿಗೆ | ಬರೆ |
ಕೊಟ್ಟೆಯ ಮನಸಿಗೆ ಹೇಗೆ || ೨ ||

ಬಿಡೆ ಬಿಡೆ ನಿನ್ನನು ನಾನು | ಹೇ |
ಜಡಜನಾಭ ಕೇಳಿನ್ನು ||
ಕಡಿದರೆ ಶರತುದಿಯಿಂದಾ | ಆ |
ಮೃಡಮಿತ್ರನ ತಾ ತಿವಿದ || ೩ || [೧೫]

**ಭಾಮಿನಿ**
ಎಂದು ಗರ್ವದಿ ಕಮಲಜನು ಶರ |
ದಿಂದ ಘಾತಿಸಲರಿತು ಶ್ರೀಹರಿ
ಚಂದದಲಿ ನಿದ್ರೆಯನು ತೊರೆದವನಂತೆ ತೋರಿಸುತ ||
ಮಂದಹಾಸದಿ ನುಡಿದ ಬ್ರಹ್ಮನೆ |
ಚಂದವಾದುದು ಬಂದೆಯೇನೈ |
ಬಂದ ಕಾರ್ಯವ ಪೇಳು ಪೊರೆಯುವೆ ನಿನ್ನ ಕರುಣದಲಿ || ೧ || [೧೬]

**ಮಾರವಿ - ಏಕ**
ಸಿರಿಯರಸನ ನುಡಿ | ಕೆರಳಿಸೆ ವಿಧಿಯನು |
ವರರಾಜಸಗುಣದಿ ||
ಪರಿಣಾಮವೊ ನಾ | ನರಿಯೆನು ಕ್ರೋಧದಿ |
ಹರಿಗೆಂದನು ಭರದಿ || ೧ ||

ಸೃಷ್ಟಿಗೆ ಜನಕನು | ಶ್ರೇಷ್ಠನು ವರ ಪರ |
ಮೇಷ್ಠಿಯು ತಾನಿರುವೆ ||
ಜ್ಯೇಷ್ಠನು ಬಂದಿರೆ | ತಟ್ಟನೆಯೆರಗದೆ |
ಯಿಷ್ಟದಿ ಮಲಗಿರುವೆ || ೨ || [೧೮]

**ಕಲ್ಯಾಣಿ - ಆದಿ**
ಜಲಜನಾಭ ನಿನ್ನ ಜನಕ |
ಇಳೆಯ ಜನರ ಬಳಕೆ ಮಾತ ||
ಗಳಹಬೇಡ ನಾನೆ ಶ್ರೇಷ್ಠ | ತೊಲಗು ಬೇಗನೆ || ೧ || [೧೯]

**ಮಾರವಿ - ಏಕ**
ಮೊದಲಿಗೆ ನಾನೇ | ವಿಧಿ ಹರಿಹರರೊಳು |
ವಿಧಿಬರಹವ ಬರೆವವನು ||
ಸದರವು ಬೇಡವೊ | ಪದುಮಾಸನನಲಿ |
ಚದುರನೆ ಒಪ್ಪಿಕೊಯೆನ್ನ || ೧ || [೨೦]

**ಕಲ್ಯಾಣಿ - ಆದಿ**
ಧೂರ್ತ ಮಧುಕೈಟಭಗೆ ಬೆದರಿ |
ಆರ್ತನಾಗಿ ಎನ್ನ ಸೇರಿ ||
ಶಕ್ತಿಹೀನನಾಗಿ ಕುಳಿತ | ಸ್ವಾರ್ಥಸಾಧಕ || ೧ || [೨೧]

**ಮಾರವಿ - ಏಕ**
ಸೃಷ್ಟಿಪ ಕಾರ್ಯದ | ಒಂದಂಗವೊ ಅದು |
ಸೃಷ್ಟಿಸೆ ಮೇದಿನಿಯ ||
ದಿಟ್ಟತನದಿ ನಾ | ನಿನ್ನಯ ಮೂಲಕ |
ಸೃಷ್ಟಿಸೆ ಅವನಿಯನು || ೧ || [೨೨]

**ಭೈರವಿ - ಏಕ**
ವಿಧಿಯಾಡಿದ ನುಡಿ ಕೇಳಿ | ಆ |
ಪದುಮಾಕ್ಷನು ಕ್ರೋಧದಲಿ ||
ಮದ ಬಂದಿತೆ ಮತಿಗೇಡಿ | ಗೆಲು |
ಕದನದೊಳೆನ್ನನು ಹೇಡಿ || ೧ ||

ಶ್ರೇಷ್ಠನು ನಾನಾಗಿರುವೆ | ಪರ |
ಮೇಷ್ಠಿಯ ಕದನಕೆ ಕರೆವೆ ||
ಬಿಟ್ಟೆನೆ ನಿನ್ನನು ಗೆಲಿದು | ಹಿರಿ |
ಪಟ್ಟವ ಪಡೆವೆನು ಒಲಿದು || ೨ || [೨೪]

**ಭಾಮಿನಿ (ಅರ್ಧ)**
ಶ್ರೇಷ್ಠ ತಾವೇ ತಾವೆನುತ್ತಲಿ |
ಸೃಷ್ಟಿ ಸ್ಥಿತಿ ಕಾಯಕವ ನಿಲ್ಲಿಸಿ |
ವಿಷ್ಣು ಬ್ರಹ್ಮರು ಹಿರಿತನದ ಪಟ್ಟಕೆ ಕಾದಲನುವಾಗೆ || ೧ || [೨೫]

**ಸೌರಾಷ್ಟ್ರ - ತ್ರಿವುಡೆ**
ಹರಿಯೆ ಧುರಕೆದುರಾಗಿ ನಿಲ್ಲೆಲೊ |
ಮರುಳ ನಿನ್ನನು ಗೆಲಿದು ತೋರಿಪೆ |
ಧರೆಯೊಳಗೆ ವರಶ್ರೇಷ್ಠ ಯಾರೆಂ | ದರಿಯುವಂತೆ || ೧ ||

ಸೃಷ್ಟಿಪುದು ಬಲು ಸುಲಭ ಸಲಹುವ |
ಕಷ್ಟ ಕಾರ್ಯವನರಿಯೊ ಮೂರ್ಖನೆ |
ಕೆಟ್ಟು ಪೋಪುದು ದೀರ್ಘಕಾಲದ | ರಕ್ಷೆ ಬೇಕು || ೨ ||

ಒಂದು ಸಾವಿರ ವರ್ಷ ಕಳೆದರು |
ಹೊಂದದೆಯೆ ಜಯ ಧುರದೊಳಂದಿಲಿ |
ಮಂದಮತಿಗಳ ತೆರದಿ ಕಾದಲು | ಚಂದದಿಂದ || ೩ ||

ಜಡಜನಾಭನೆ ನಿನ್ನ ಬಿಡುವೆನೆ |
ತೊಡಗಿಸುವೆ ಮಾಹೇಶ್ವರಾಸ್ತ್ರವ |
ಕೆಡುವ ಕಾಲವು ಬಂದಿತೆನ್ನುತ | ನುಡಿದ ಬ್ರಹ್ಮ || ೪ ||

ಪಾಶುಪತ ಅಸ್ತ್ರವನು ಶ್ರೀಹರಿ |
ರೋಷದಿಂದಲೆ ತೆಗೆಯಲಾ ಕ್ಷಣ |
ಆ ಸಮಯ ನಡೆದದ್ಭುತವ ನಾ | ನೇನನೆಂಬೆ || ೫ || [೩೦]

**ವಾರ್ಧಕ**
ಅಂಬುಜಾಸನ ಹರಿಯ ದಿವ್ಯಾಸ್ತ್ರ ಧುರದಲಿ ವಿ |
ಜೃಂಭಿಸಲು ತಿಳಿದಾಗ ಗರ್ವಿತರ ಮದವಿಳುಹೆ |
ಅಂಬೆ ಲಲಿತಾಂಬೆ ಶ್ರೀದೇವಿ ತಾ ಮನಮಾಡಿ ಬ್ರಹ್ಮಾಂಡ ಮೀರಿ ನಿಂತಾ ||
ಕಂಬವನೆ ನಿರ್ಮಿಸಲು ಹರಿ ವಿಧಿಯ ಮಧ್ಯದೊಳು |
ಸ್ತಂಭಿಸಲು ದಿವ್ಯಾಸ್ತ್ರ ಮಂಕಾಗೆ ಅದರೆದುರು |
ಕುಂಭಿನಿಯು ಬೆರಗಾಗೆ ತುದಿಬುಡವನರಿಯದೆಯೆ ಶ್ರೀಹರಿಯು ಅಜನಿಗೆಂದ || ೧ || [೩೧]

**ಬಿಲಹರಿ - ಅಷ್ಟ**
ಅಂಬುಜಾಸನ ಕಂಡೆಯೇನು | ನೋಡೆ |
ನಂಬಲಿಕಸದಳ ಸ್ತಂಭವಿದೇನೋ ||
ಸ್ತಂಭಿಸೆ ದಿವ್ಯಾಸ್ತ್ರ ನಮ್ಮ | ಈ |
ಕಂಬದ ಸಂಬಂಧವೇನೆಲೊ ಬ್ರಹ್ಮ || ೧ ||

ಆದಿಯೆಲ್ಲಿದೆ ಅಂತ್ಯವೆಲ್ಲಿ | ಅದ |
ಶೋಧಿಸಬೇಕೀಗ ನಮ್ಮನಮ್ಮಲ್ಲಿ ||
ವಾದಕೆ ಸಮಯವಿದಲ್ಲ | ನೀನು |
ಹೋದರೆ ಮೇಲಕ್ಕೆ ಉತ್ತರವೆಲ್ಲ || ೨ ||

ಬುಡವ ಶೋಧಿಸೆ ಪೋಪೆ ನಾನು | ನೀನು |
ನಡೆಯಯ್ಯ ಹಂಸವನೇರುತ್ತಲಿನ್ನು ||
ದೃಢದ ಸೂಕರ ವೇಷದಿಂದ | ನಾ |
ತಡಮಾಡದೈದುವೆ ಬಲು ಭರದಿಂದ || ೩ || [೩೪]

**ಭಾಮಿನಿ**
ಕಳೆಯೆ ಸಾವಿರ ವರ್ಷ ಶೋಧಕೆ |
ಫಲವು ದೊರೆಯದೆ ಹರಿ ವಿಧಾತರು |
ಬಳಲುತಿರೆ ಅರಿತಾಗ ಶ್ರೀಲಲಿತಾಂಬೆ ಜ್ಞಾನವನು ||
ಸಲಿಲದಿಂ ಕರುಣಿಸಲು ಲಿಂಗವ |
ಅಳುಕದೆಯೆ ದಿಟ್ಟಿಸಲು ಹರಿ ವಿಧಿ |
ತಿಳಿದರಂದಾ ದೇವಿಮಹಿಮೆಯ ನಾದವೋಂಕಾರ || ೧ || [೩೫]

**ವಾರ್ಧಕ**
ದೇದೀಪ್ಯಮಾನದಿಂ ಬೆಳಗುತಿರೆ ಶತಕೋಟಿ |
ಆದಿತ್ಯಪ್ರಭೆಯಿಂದ ಓಂಕಾರನಾದದಲಿ |
ಮೇದಿನಿಯ ಪುಳಕಿಸಲು ಜ್ವಾಲೆಯನ್ನುಗುಳುತಿಹ ಮೋಹದಾ ಪರಿಯ ಕಂಡು ||
ಆದಿಮಾಯೆಯ ಲೀಲೆ ಕಾಮೇಶ್ವರನ ಸಹಿತ |
ಅರ್ಧನಾರೀಶ್ವರನ ಸಾಕಾರವಿಹುದೆನುತ |
ಮೋದದಿಂ ನಿಶ್ಚಯಿಸಿ ಶ್ರೀದೇವಿಯಂ ಸ್ತುತಿಸಲಾ ದಿನದಿ ಹರಿಬ್ರಹ್ಮರು || ೧ || [೩೬]

**ಕಾಂಭೋದಿ - ಝಂಪೆ**
ಜಯತು ಜಯ ಜಗನ್ಮಾತೆ | ಜಯತು ತ್ರಿಗುಣಾತೀತೆ |
ಜಯತು ಮೂಜಗಜನನಿ ವಿನುತೆ ||
ಜಯತು ಮುಕ್ಕಣ್ಣನ | ರ್ಧಾಂಗಿ ಮಾಹೇಶ್ವರಿಯೆ |
ಜಯತು ಮಣಿದ್ವೀಪಪುರವಾಸೇ || ೧ ||

ಬುದ್ಧಿಹೀನರ ತೆರದಿ | ಯುದ್ಧಗೈದೆವು ನಾವು |
ತಿದ್ದಿ ತಪ್ಪುಗಳ ಕ್ಷಮಿಸೆಮ್ಮ ||
ಶುದ್ಧಮನದಲಿ ನಿನ್ನ | ಬೇಡಿಕೊಂಬೆವು ದಯದಿ |
ಭದ್ರೆ ದರುಶನವ ಕೊಡು ನಮಗೆ || ೨ || [೩೭]

**ಭಾಮಿನಿ**
ಬದ್ಧ ಪ್ರಾಂಜಲ ಮನಸಿನೊಳಗಾ |
ಭದ್ರೆ ಶ್ರೀದೇವಿಯನು ಸ್ಮರಿಸಲು |
ಅರ್ಧನಾರೀಶ್ವರನ ರೂಪದೊಳಿತ್ತು ದರ್ಶನವಾ ||
ಶುದ್ಧ ಸ್ಫಟಿಕದ ಲಿಂಗಮಧ್ಯದೊ |
ಳೆದ್ದು ಬಂದರೆ ತ್ರಿಪುರಸುಂದರಿ |
ಬಿದ್ದರಾ ಚರಣದಲಿ ದೇವಿಯ ಸ್ತುತಿಸೆ ಕರುಣದಲಿ || ೧ || [೩೮]

**ನವರೋಜು - ಏಕ**
ಬಳಲಿದಿರೇ ಹರಿಬ್ರಹ್ಮ | ನೀವ್ |
ತೊಳಲಿದಿರೇ ಅರಿಯದೆ ನಮ್ಮ ||
ಇಳೆಯುದ್ಧಾರದ | ಫಲಪ್ರಾಪ್ತಿಗೆ ನಾ |
ತಳೆದಿರೆ ನಿಶ್ಚಯ | ಕೊಳುಗುಳ ನಿಮ್ಮೊಳು || ೧ ||

ಪ್ರಕೃತಿಪುರುಷ ಮಿಲನಾ | ಜಗ |
ದುತ್ಕರ್ಷವು ತಿಳಿಯಿರಿ ಮುನ್ನಾ ||
ಸುಕೃತವು ವಿಧವಿಧ | ವಿಕಸಿತ ಜನನವು |
ನಿಖರವಾಗಿ ಈ | ಪ್ರಕೃತಿಯೊಳಗೆ ನಿಜ || ೨ ||

ಕರೆಯಲಿ ಹಂಸನು ಎನುತಾ | ವಿಧಿ |
ಧರೆಯೊಳಗೆ ವಿಖ್ಯಾತ ||
ಕರೆಯಲು ಶ್ವೇತವ | ರಾಹದ ಕಲ್ಪವು |
ಹರಿಯವತಾರದಿ | ಧರಣಿಯೊಳಾಯಿತು || ೩ || [೪೨]

**ವಾರ್ಧಕ**

ಸತ್ವಗುಣ ಲಕ್ಷ್ಮಿ ರಾಜಸದ ಸರಸ್ವತಿ ಮತ್ತೆ |
ಉತ್ತಮದ ತಮಗುಣದ ಮಹಕಾಳಿಯೊಂದಂಶ |
ಅರ್ತಿಯಿಂ ಸೇರಿ ತ್ರಿಕಣ್ಣೇಶಿ ನಾಮದಿಂ ಜಗವ ಪೊರೆಯುವೆನು ಮುಂದೆ ||
ಉತ್ತಮರೆ ನಿಮ್ಮ ನಿಮ್ಮಯ ಕ್ಷೇತ್ರಗಳಿಗೈದಿ |
ಅರ್ತಿಯಿಂ ಸೃಷ್ಟಿ ಸ್ಥಿತಿ ಕಾರ್ಯ ಗೈಯುವುದು ಭಯ |
ಭಕ್ತಿಯಿಂ ಬೇಡಿದರೆ ಇತ್ತು ದರ್ಶನವ ತವ ಕಷ್ಟ ಪರಿಹರಿಪೆನೆಂದು || ೧ ||

ಭೂರಿ ಬೃಹದಾಕಾರ ಪರಮಪಾವನದರ್ಧ |
ನಾರೀಶ್ವರನ ಲಿಂಗ ಹ್ರಸ್ವವಾಗಿಯೆ ಮುಂದೆ |
ಧಾರುಣಿಯೊಳಲ್ಲಲ್ಲಿ ಸ್ಥೂಲರೂಪದಿ ದುರ್ಗೆಯೆಂಬುದಾಗಿಯೆ ಮೆರೆವೆನು ||
ಧಾರುಣಿಯೊಳ್ ಪ್ರಕೃತಿ ಪುರುಷರ ಮಿಲನ ಸಂಕೇತ |
ತೋರಿದೆವು ಅರ್ಧನಾರೀಶ್ವರನ ರೂಪದಲಿ |
ಕಾರಣಿಕರೇ ನೀವು ಸಮಸ್ಥಿತಿಯ ಮೀರದೆಯೆ ಶರಣರನು ಪೊರೆವುದೆನುತ || ೨ || [೪೪]

**ಸೌರಾಷ್ಟ್ರ - ತ್ರಿವುಡೆ**

ಒಂದು ದಿನ ಕ್ಷೀರಾಬ್ಧಿಪುರದೊಳು |
ಸಿಂಧುಶಯನನರ್ಧಾಂಗಿ ಶರಧಿಜೆ |
ಬಂದಳಾ ಹರಿಯೆಡೆಗೆ ಮುದದೊಳು | ಚಂದದಿಂದ || ೧ ||

ಪನ್ನಗಾಸನನನ್ನು ಮೆಚ್ಚಿಸೆ |
ರನ್ನೆ ವರಮಹಲಕುಮಿಯಂದದಿ |
ತನ್ನ ತಾ ಸಿಂಗರಿಸೆ ಮದುವೆಯ | ಕನ್ಯೆಯಂತೆ || ೨ ||

ಸಿರಿಯರಸಿ ಧರಿಸಿದಳು ಕನಕಾಂ |
ಬರವ ದಿವ್ಯಾಭರಣ ಧರಿಸುತ |
ವರ ಸುಗಂಧವ ಲೇಪಿಸುತ ಬರೆ | ಹರಿಯ ಬಳಿಗೆ || ೩ ||

ಹಣೆಯ ತಿಲಕವ ತಿದ್ದಿಕೊಳ್ಳುತ |
ಫಣಿಶಯನನೆಡೆ ಬರಲು ಮಾಧವ |
ಇನಿಯಳನು ಗಮನಿಸದೆ ಕುಳಿತರೆ | ಅನುನಯದೊಳು || ೪ ||

ಮತ್ತಗಾಮಿನಿ ಹರಿಗೆ ವಂದಿಸಿ |
ಭಕ್ತಿಭಾವದಿ ನುಡಿದಳಂದಿಲಿ |
ಚಿತ್ತಜಯ್ಯನೆ ನೋಡು ಯೆನ್ನನು | ಅರ್ತಿಯಿಂದಾ || ೫ ||

ಮೆಚ್ಚಿಸಲು ನನ್ನನ್ನೆ ನನ್ನಯ |
ಇಚ್ಛೆಯಂತೆಯೆ ಸಿಂಗರಿಸಿ ಬರೆ |
ತುಚ್ಛ ಭಾವದಿ ನೋಳ್ಪೆಯೇತಕೆ | ಸತ್ಯರೂಪ || ೬ || [೫೦]

**ಭಾಮಿನಿ**
ಬಾರಿ ಬಾರಿಗು ವಲ್ಲಭನ ಮನ |
ಸಾರೆ ಸೆಳೆಯಲು ಯತ್ನಿಸುವ ನಿಜ |
ನಾರಿ ಲಕ್ಷ್ಮಿಯ ಕಂಡು ಸುಮ್ಮನೆ ಗಹಗಹಿಸಿ ನಗಲು ||
ಕ್ಷೀರಸಾಗರಶಯನನೊರಸೆಗೆ |
ಭಾರಿ ಸಂಭ್ರಮದಿಂದ ಬಂದಾ |
ವೀರನಾರಿಗೆಯಾಯ್ತು ಅವಮಾನವನು ತಾಳದೆಯೆ || ೧ || [೫೧]

**ಭೈರವಿ - ಏಕ**
ಪತಿಪರಮೇಶ್ವರ ನೀನು | ತವ |
ಸತಿಯಪಮಾನವಿದೇನು ||
ಮತಿ ಕೆಟ್ಟಿತೆ ನಿನಗಿಂದು | ಶ್ರೀ |
ಪತಿಯೇ ನಗುವೇನೆಂದು || ೧ ||

ವ್ಯರ್ಥವಾಯ್ತು ಅಲಂಕಾರ | ಬೇ |
ಕಿತ್ತೆ ಈ ಶೃಂಗಾರ ||
ಹೊತ್ತನು ಸುಮ್ಮನೆ ಕಳೆದೆ | ನಿಜ |
ಪತ್ನಿಯ ನೀ ಹಂಗಿಸಿದೆ || ೨ ||

ಅರಿತೆನು ಕ್ಷಮಿಸೆನು ನಿನ್ನ | ಶ್ರೀ |
ಹರಿ ಬಿಡೆ ಹಿಡಿಶಾಪವನ ||
ಕಡಿದುರುಳಲಿ ತವಶಿರವು | ಪೊ |
ಡವಿಯೊಳಗೊಂದಿನ ನಿಜವು || ೩ || [೫೪]

**ಭಾಮಿನಿ**
ಶರಧಿಜೆಯ ಶಾಪವನು ಕೇಳುತ |
ಮುರಮಥನ ತಾನರಿತನಿವಳಲಿ |
ಭರಿಸಿಕೊಂಡಿರೆ ತಾಮಸದ ಗುಣ ನುಡಿಸಿತಿಂದಿನಲಿ ||
ಸ್ಮರಿಸೆ ಶ್ರೀದೇವಿಯನು ಭಕ್ತಿಯೊಳ್ |
ಸರಿಯಿತಾ ತಮಗುಣವು ಸತಿಯಲಿ |
ಹರಿಯ ಚರಣದಿ ಬಿದ್ದು ಗೋಳಿಡೆ ದುಃಖ ತಾಳದೆಯೇ || ೧ || [೫೫]

**ಸಾಂಗತ್ಯ - ರೂಪಕ**
ಪ್ರಾಣನಾಯಕ ದೇವ | ಯೇನಾಯಿತಿಂದಿಲಿ |
ನಾನರಿಯೆನು ಘೋರಪಾಪ ||
ಹೀನಕೃತ್ಯವದಾಯ್ತು | ಯೆನ್ನಿಂದ ಮನ್ನಿಸಿ |
ನೀನೀಗ ಪೊರೆಯಬೇಕೆನುತ || ೧ ||

ಹತ್ತಿದ ಮದದಿಂದ | ಇತ್ತೆ ಶಾಪವ ತವ |
ಕತ್ತು ಕತ್ತರಿಸಿ ಬಿದ್ದಿರಲಿ ||
ಪೃಥ್ವಿಯೊಳೊಂದಿನ | ಯೆಂಬ ಶಾಪದ ಅರ್ಥ |
ಹೊತ್ತಿಗೆ ನಾ ತಿಳಿಯದಾದೆ || ೨ ||

ಕಣ್ಣೀರನಿಡುವ ಮನ | ದನ್ನೆಯ ಕಂಡು ಸು |
ಪರ್ಣವಾಹನನು ಕರುಣದಲಿ ||
ಸನ್ನುತಾಂಗಳ ಪಿಡಿ | ದೆತ್ತಿ ಪೇಳಿದ ಗುಣ |
ರನ್ನೆಯ ಮರುಗಬೇಡೆನುತ || ೩ || [೫೬]

**ನವರೋಜು - ಏಕ**
ಅಳುವೆಯೇತಕೆ ಕಾಂತೆ | ನಿಜ |
ತಿಳಿಯುವೆಯಾ ಸಚ್ಚರಿತೆ ||
ಕೆಲ ಕಾಲಕೆ ತಮ | ಗುಣ ನಿನ್ನೊಳಗಿರೆ |
ತಳೆದೆಯ ಕೋಪವ | ನಿತ್ತೆಯ ಶಾಪವ || ೧ ||

ಶ್ರೀದೇವಿ ಲಲಿತಾಂಬೆ | ಈ |
ಮೇದಿನಿಯೊಳ್ ಜಗದಂಬೆ ||
ಸಾದರದೇಳಿಗೆ | ಬಯಸಿರೆ ಯೀಪರಿ |
ಕ್ರೋಧದಿ ಶಾಪವು | ನಿನ್ನಿಂದಾದುದು || ೨ || [೬೦]

**ಭಾಮಿನಿ (ಅರ್ಧ)**
ಇಂದಿರೆಯ ಸಂತೈಸಿ ಕರುಣದಿ |
ಸಿಂಧುಶಯನನು ಮುದದಿ ಕುಳಿತಿರೆ |
ಮುಂದಿನಾ ಕತೆಯೇನನೆಂಬೆ ವಸುಂಧರೆಯೊಳು || ೧ || [೬೧]

**ಕಾಂಭೋದಿ - ಝಂಪೆ**
ಇತ್ತ ಶೋಣಿತಪುರದಿ | ದೈತ್ಯಪುಂಗವನೊಬ್ಬ |
ಧೂರ್ತ ಹಯಗ್ರೀವನೆಂದೆನುವಾ ||
ದುಷ್ಟ ರಕ್ಕಸನಂದು | ಮೆರೆದಿರಲು ವೈಭವದಿ |
ಇತ್ತನೋಲಗವೊಂದು ದಿನದಿ || ೧ ||

ದುಷ್ಟ ದನುಜರನೆಲ್ಲ | ಒಟ್ಟುಗೂಡಿಸುತ ಜಗ |
ಜಟ್ಟಿಯಾಗಿಯೆ ಮೆರೆದನಂದು ||
ಅಟ್ಟಿ ದಿವಿಜರ ನಾಕ | ಪಟ್ಟವೇರುವ ಬಯಕೆ |
ಪುಟ್ಟಿರಲು ಮನದೊಳಗೆ ಮುದದಿ || ೨ ||

ಅರಿತು ಶುಕ್ರಾಚಾರ್ಯ | ದುರುಳನೆಡೆ ಬಂದಿರಲು |
ಚರಣಕೆರಗುತ ಭಕ್ತಿಯಿಂದ ||
ಹರಿವಿಷ್ಟರವನಿತ್ತು | ಮನ್ನಿಸಿದ ಶಿಷ್ಯನನು |
ಕರುಣದಿಂದೀಕ್ಷಿಸುತ ಭೃಗುವು || ೩ || [೬೪]

**ಬಿಲಹರಿ - ಅಷ್ಟ**
ದೈತ್ಯಶ್ರೇಷ್ಠನೆ ಹಯಗ್ರೀವಾ | ನಿನ್ನ |
ಚಿತ್ತದ ನಡೆಯೇನು ಮಹಾನುಭಾವ ||
ಶಕ್ತಿ ಸಾಮರ್ಥ್ಯ ವೃದ್ಧಿಸಲು | ಪೇಳ್ವೆ |
ಯುಕ್ತಿಯನೊಂದನು ನೀನು ಅದನು ಪಾಲಿಸಲು || ೧ ||

ನಿನ್ನ ಪೂರ್ವಿಕರು ಬ್ರಹ್ಮನನು | ಮೇಲ್ |
ಪನ್ನಗಾಭರಣನ ಒಲಿಸಿ ವರಗಳನು ||
ಮುನ್ನ ಪಡೆದಿದ್ದರೇನಂತೆ | ಫಲ |
ವನ್ನು ಪಡೆಯಲಾಯ್ತು ನಿನ್ನದೆ ಚಿಂತೆ || ೨ ||

ಶ್ರೀದೇವಿಯೊಲುಮೆಯ ಪಡೆದು | ನೀನು |
ಸಾಧಿಸು ಮನದಿಷ್ಟ ಸಂತಸ ತಳೆದು ||
ಆದಿಮಾಯೆಯ ದಯದಿಂದ | ನೀನು |
ಮೇದಿನಿಯಲಿ ಕೀರ್ತಿ ಪಡೆಯುವೆ ಕಂದ || ೩ || [೬೭]

**ಸುರುಟಿ - ಏಕ**
ಗುರು ಶುಕ್ರನ ನುಡಿಗೆ | ಹರುಷದಿ |
ದುರುಳ ನುಡಿದ ಕಡೆಗೆ ||
ವಿರಚಿಸಿ ತಪವನು | ವರಗಳ ಪಡೆಯುವೆ |
ಕರುಣಿಪಳೆನಗಾ | ವಾಂಛಿತ ಫಲವನು || ೧ ||

ಯತಿವರ್ಯಗೆ ಮಣಿದು | ದೈತ್ಯನು |
ಅತಿಸಂತಸ ತಳೆದು ||
ಹಿತದಿ ಪೊರಟ ಸರ | ಸ್ವತಿ ನದಿ ತೀರಕೆ |
ಪಥದುದ್ದಕು ಶ್ರೀದೇವಿಯ ನೆನೆಯುತ || ೨ || [೬೯]

**ಭಾಮಿನಿ**
ಕಳೆಯೆ ಸಾವಿರ ವರ್ಷ ತಪದೊಳು |
ಒಲಿಯದಿರೆ ಶ್ರೀದೇವಿ ರೋಷದಿ |
ಇಳೆಗೆ ತನ್ನಯ ಶಿರವ ಕಡಿದಿಕ್ಕುವೆನುಯೆನುತಂದು ||
ಖಳನು ಖಡ್ಗವ ಝಳಪಿಸುತಲಿರೆ |
ತಿಳಿದು ಶ್ರೀಲಲಿತಾಂಬೆ ಖಳನೆಡೆ |
ಗೊಲಿದು ದರ್ಶನವಿತ್ತಳೇನಾ ದಿನದಿ ಸಂಭ್ರಮದಿ || ೧ || [೭೦]

**ಕಾಂಭೋದಿ - ಝಂಪೆ**
ಮೆಚ್ಚಿದೆನು ಹಯಗ್ರೀವ | ದೈತ್ಯರೊಡನೆ ನಿನ್ನ |
ಹೆಚ್ಚಿನಾ ತಪಕೆ ಒಲಿದಿಪ್ಪೆ ||
ಇಚ್ಛೆಯೇನುಂಟು ಕೇ | ಳಿತ್ತಪೆನು ಕರುಣದಲಿ |
ಹುಚ್ಚಾಟ ಬಿಡು ಮಗನೆ ಬರಿದೆ || ೧ ||

ಮಂದಹಾಸದಿ ನುಡಿಯೆ | ಶ್ರೀದೇವಿ ಚರಣಗಳ |
ವಂದಿಸುತ ಖಳ ನುಡಿದ ಮಾತೆ ||
ಕುಂದದಮರತ್ವವನು | ಯಿಂದೆನಗೆ ನೀಡಬೇ |
ಕೆಂದು ಬೇಡುವ ಪರಿಯ ಕಂಡು || ೨ ||

ಪುಟ್ಟಿದವನಿಗೆ ಮರಣ | ಕಟ್ಟಿಟ್ಟ ಬುತ್ತಿಯಿದು |
ಕಷ್ಟಸಾಧ್ಯವೊ ತಿಳಿಯೊ ಕಂದ ||
ಅಷ್ಟಪಾಣಿಯ ನುಡಿಗೆ | ದುಷ್ಟದಾನವನೆಂದ |
ಕಟ್ಟಕಡೆ ಬೇಡುವೆನು ಈಗ || ೩ ||

ಎನ್ನ ಪೆಸರಾಂತವನು | ಹಯಮುಖವ ಹೊಂದಿದರೆ |
ನಿರ್ಣಯದ ಮೃತ್ಯು ಅವನಿಂದ ||
ಎನ್ನ ಪಾಲಿಗೆ ಬರಲಿ | ಎನ್ನುವಾ ದಾನವನ |
ಮನ್ನಿಸಿದಳಾ ದೇವಿಯೊಲಿದು || ೪ || [೭೪]

**ಸೌರಾಷ್ಟ್ರ - ತ್ರಿವುಡೆ**
ದೇವಿಯಿಂದಲೆ ವರವ ಪಡೆದಿರೆ |
ಭೂವಲಯದೊಳಗಾರು ಈ ಹಯ |
ಗ್ರೀವಗೆದುರೆನುತಂದು ಸಂತಸ | ತಾಳಿ ದೈತ್ಯ || ೧ ||

ಶೋಣಿತಾಪುರಕೈದಿ ತನ್ನಯ |
ದಾನವರ ಕರೆಯಲ್ಕೆ ಬಂದರು |
ಭಾನುಕಾಸುರ ಖಂಡಕಾಸುರ | ರೆನುವ ಖಳರು || ೨ || [೭೬]

**ಮಾರವಿ - ಏಕ**

ಈ ವಿಧದಲಿ ಕರೆ | ಸಿದೆ ಯೇತಕೆ ಹಯ |
ಗ್ರೀವನೆ ಯೆನ್ನೊಡೆಯ ||
ನಾವೆಲ್ಲರು ತವ | ಸೇವಕರಾಗಿರೆ |
ಈವುದು ಅಪ್ಪಣೆಯ || ೧ ||

ಮುಕ್ಕಲೆ ಇಂದ್ರನ | ತಿಕ್ಕಲೆ ಬ್ರಹ್ಮನ |
ಲೆಕ್ಕಿಸೆ ನಾನವರ ||
ಉಕ್ಕುತ ಮೆರೆವರ | ಸೊಕ್ಕಡಗಿಸಿ ಮಮ |
ವಿಕ್ರಮ ತೋರುವೆನು || ೨ ||

ಬಾಧಿಸದೆನಗಾ | ಮರಣದ ಭಯವಾ |
ಶ್ರೀದೇವಿಯ ವರದಿ ||
ಕಾದುತ ಬರ್ದಿಲ | ರೊಡೆಯನ ಗೆಲ್ಲುವೆ |
ಮೋದದಿ ನಾಕವನು || ೩ ||

ವಶಪಡಿಸಲು ಬೇ | ಕೆನುತಿಹ ದೈತ್ಯಗೆ |
ಅಸುರೇಂದ್ರನು ನುಡಿದ ||
ವಶಪಡಿಸುವ ನಾ | ಕವ ನಾವಿಂದಿಲಿ |
ಅಸುರರು ನಾವಿಹೆವು || ೪ ||

ಖಂಡಕದೈತ್ಯನು | ನುಡಿದ ಪುರಂದರ |
ಭಂಡತನದಿ ಮೆರೆವ ||
ಖಂಡಿಸುತವನಾ | ರುಂಡವ ಮೆರೆಸುವ |
ಚಂಡಪರಾಕ್ರಮವ || ೫ ||

ಭೃತ್ಯರ ನುಡಿಗಾ | ದೈತ್ಯೇಶನು ಮುದ |
ವೆತ್ತು ಸೈನ್ಯಸಹಿತ ||
ಮುತ್ತಲು ನಾಕವ | ತಿಳಿದಾ ದೂತರು |
ವೃತ್ರಾರಿಗೆ ನುಡಿಯೆ || ೬ || [೮೨]

**ಕಾಂಭೋದಿ - ಝಂಪೆ**

ವೃತ್ರಾರಿಯಂದು ತಾ | ನುತ್ತಮದ ನಾಕದೊಳು |
ಇತ್ತನೋಲಗವ ವೈಭವದಿ ||
ಉತ್ತಮದ ವೇದಘೋ | ಷದ ಮಂತ್ರ ಮೊಳಗುತಿರೆ |
ಚಿತ್ತಜಯ್ಯನ ನೆನೆದು ಮನದಿ || ೧ ||

ಅಷ್ಟದಿಕ್ಪಾಲಕರು | ಅಷ್ಟರಲೆ ನೆರೆದಿರಲು |
ತುಷ್ಟಿಯಿಂದಲೆ ಸುರಪ ನುಡಿದ ||
ಶ್ರೇಷ್ಠ ತ್ರೈಮೂರ್ತಿಗಳ | ದಯದಿಂದ ಈ ನಾಕ |
ಪಟ್ಟ ತನಗಾಯ್ತು ಮುದದಿಂದ || ೨ ||

ಸುರಧೇನು ಕಲ್ಪತರು | ಕಲ್ಪವೃಕ್ಷಗಳು ಸುರ |
ತರುಣಿಯರು ನಾಕದೊಳಗಿರಲು ||
ಸರಿಯಾರು ನಮಗೆಂದು | ಸುರಪತಿಯು ಮುದದೊಳಿರೆ |
ಚರರು ಬಂದೆರಗೆ ಭೀತಿಯೊಳು || ೩ || [೮೫]

**ಮುಖಾರಿ - ಏಕ**
ಲಾಲಿಪುದಮರಲೋಕ ದೊರೆಯೆ | ನಮ್ಮೆಲ್ಲರನ್ನು |
ಪಾಲಿಸು ಕರುಣದಿಂದ ಸಿರಿಯೇ ||
ಅರುಹಲದೇನದು | ದುರುಳರು ನಾಕಕೆ |
ಭರದೊಳಗೈತರೆ | ಹರಿಸೈ ಗಮನವ || ೧ ||

ಶೋಣಿತಾಪುರ ದೊರೆ ತಾನಂತೆ | ಹಯಗ್ರೀವನೆಂಬ |
ದಾನವ ಪಡೆಗೆ ಒಡೆಯನಂತೆ ||
ಕಾಣಲು ಭೀಕರ | ಕ್ಷೋಣಿಯ ದೈತ್ಯರು |
ಕಾಣುವೆ ಸುರನನು | ಚೂಣಿಯೊಳೆನ್ನುತ ||
ತ್ರಾಣದಿ ಕಾದಲು | ನಮ್ಮನು ಬೆದರಿಸಿ |
ಪ್ರಾಣವ ತೆಗೆಯುವೆ | ಕ್ಷಣದೊಳಗೆನ್ನುವ || ೨ || [೮೭]

**ಕೇದಾರಗೌಳ - ಝಂಪೆ**
ಚಾರಕರ ನುಡಿ ಕೇಳುತಾ | ರೋಷದಲಿ ವೃ ||
ತ್ರಾರಿ ಕ್ರೋಧವ ತಾಳುತ ||
ಯಾರಲ್ಲಿ ದಿಕ್ಪತಿಗಳು | ಬನ್ನಿ ತವ |
ತೋರಿಪುದು ಶೌರ್ಯವೆನಲು || ೧ ||

ವರುಣನೆಂದನು ಮಘವನೆ | ನಮ್ಮನ್ನು |
ಕರಸಿದಾ ಕಾರಣವನೆ ||
ಅರುಹಬೇಕೀಗ ಜೀಯ | ಪೂರೈಪೆ |
ಹರಿಯ ದಯದಿಂದ ರಾಯ || ೨ ||

ಮರುತನೆಂದನು ಮಘವನೆ | ಬಂದರೆ |
ದುರುಳದಾನವರುಗಳನೆ ||
ಧುರದೊಳಗೆ ನಾ ಲೆಕ್ಕಿಸೆ | ಕಡಿದಿಕ್ಕಿ |
ಸಿರಿಜಯವ ತಂದು ಕೊಡುವೆ || ೩ ||

ಲೇಸನಾಡಿದಿರೆನ್ನುತ | ಪೊರಟಾಗ |
ವಾಸವನು ಸುರರು ಸಹಿತ ||
ಆ ಸಮಯ ಧುರಕೆ ಪೊರಡೆ | ಭಾನುಕನ |
ರೋಷದೊಳು ತಡೆದು ಮರುತ || ೪ || [೯೧]

**ಭೈರವಿ - ಏಕ**
ನಿಲ್ಲೆಲೊ ದುರುಳನೆ ಧುರಕೆ | ನೀ |
ನೆಲ್ಲಿಗೆ ಬಂದಿಹೆ ಜೋಕೆ ||
ಕೊಲ್ಲುವ ವರುಣನು ಯಿರಲು | ಮದ |
ಸಲ್ಲದು ನಿನಗಿಂದಿನೊಳು || ೧ ||

ಭಾನುಕ ದೈತ್ಯನು ನಾನೇ | ತವ |
ಪ್ರಾಣವ ಹೀರುವ ಯಮನೆ ||
ಊಣಿಗೆ ವದಗೆಂದೆನುತ | ಆ |
ದಾನವ ಶರ ಬಿಡಲಿತ್ತ || ೨ ||

ಖಂಡಿಸಿ ಮರುತನು ನುಡಿದಾ | ಎಲೊ |
ಭಂಡನೆ ಬಂತು ಪ್ರಮಾದ ||
ಚೆಂಡಾಡುವೆ ತವ ಶಿರವ | ಶರ |
ಖಂಡಿಸು ನೋಡುವೆ ಭಡವ || ೩ ||

ನಿನ್ನ ಗೆಲಿದರೇನುಂಟು | ಬಿಡು |
ಗಣ್ಣರೊಡೆಯ ಬರಲಿಂತು ||
ನಿರ್ಣಯ ಕದನದಿ ಗೆಲುವೆ | ಈ |
ಉನ್ನತ ನಾಕದಿ ಮೆರೆವೆ || ೪ || [೯೫]

**ಮಾರವಿ - ಏಕ**
ವರುಣನು ಅಂದಿಲಿ | ಖಂಡಕ ದೈತ್ಯನ |
ಧುರದೊಳು ತಡೆದೆಂದ ||
ದುರುಳನೆ ಯೆಲ್ಲಿಗೆ | ಪೋಗುವೆ ನಿಲ್ಲೆಲೊ |
ಧುರದೊಳು ಸೆಣಸೀಗ || ೧ ||

ವರುಣನು ನೀನೆಯೊ ಕಾಣುವೆ ಪೌರುಷ |
ತೋರಿಸು ವಿಕ್ರಮವ ||
ಶೂರತನವ ನಾ | ಕಾಂಬೆನು ಮೆರೆಯಿಸು |
ಪೌರುಷ ಕಾಳಗದಿ || ೨ ||

ಹಿಂದಕೆ ನಿನ್ನಯ | ಪೂರ್ವಿಕರಾ ಕಥೆ |
ಚಂದದಿ ಮರೆತಿಹೆಯ ||
ಸಂದರು ಯಮನಾ | ಲಯಕಾ ಖೂಳರು |
ಇಂದಿರೇಶ ದಯದಿ || ೩ ||

ದೇವಿಯ ವರ ಹಯ | ಗ್ರೀವನು ಪಡೆದಿರೆ |
ಸಾವಿನ್ನಿರದೆಮಗೆ ||
ನಾವೀ ನಾಕದ | ಪಟ್ಟವ ಪಡೆವೆವು |
ಈ ವಿಧ ಧುರದೊಳಗೆ || ೪ || [೯೬]

**ಶಂಕರಾಭರಣ - ಮಟ್ಟೆ**
ಸುರರ ಸೋಲ ಕಂಡ ಸುರಪ |
ದುರುಳ ದೈತ್ಯತಿಲಕನನ್ನು |
ಧುರದಿ ತಡೆದು ಶರವ ಬಿಡಲು | ಭರಿತ ರೋಷದಿ || ೧ ||

ನಾಕದಧಿಪ ಬಂದೆಯೇನೊ |
ನಾಕವನ್ನು ಬಿಟ್ಟು ತೊಲಗು |
ಯಾಕೆ ಕಾಣದಾದೆ ನಿನ್ನ | ಸುರರ ದುರ್ಗತಿ || ೨ ||

ಬಿಟ್ಟುಕೊಡುವನಲ್ಲ ನಾಕ |
ಪಟ್ಟವನ್ನು ನಿನಗೆ ಯಮನ |
ಪಟ್ಟ ತೋರಿ ಕೊಡುವೆನೀಗ | ಭ್ರಷ್ಟ ಖೂಳನೆ || ೩ ||

ಕಾವರಾರು ನಿನ್ನನೀಗ |
ದೇವಿ ವರವ ಪಡೆದ ಹಯ |
ಗ್ರೀವ ನಾನು ಸುರಪ ನಿನಗೆ | ಸಾವು ಬಂದಿದೆ || ೪ || [೧೦೩]

**ವಾರ್ಧಕ**
ಸುರರ ಬಡಿದೋಡಿಸಲು ಧುರದೊಳಗೆ ಹಯಗ್ರೀವ |
ಭರಿತತೋಷದಿ ನಾಕಪುರವ ವಶಕರಿಸುತ್ತ |
ಮೆರೆದಿರಲು ಸುರಲೋಕ ಸಂಭ್ರಮವನನುಭವಿಸಿ ಕರುಣೆಯಿಲ್ಲದೆ ಮುನಿಗಳ ||
ವರಕ್ರತುವ ಕೆಡಿಸುತ್ತ ವಿಷಯಲಂಪಟನಾಗಿ |
ಧರೆಯಮರ ಗೋವುಗಳ ಪೀಡಿಸುತ ಸಂತಸದೊ |
ಳಿರುತಿರಲು ಒಂದು ದಿನ ವನಬೇಟೆಗಾಶಿಸುತ ಪಡೆಸಹಿತ ಪೊರಟನಾಗ || [೧೦೪]

**ಮುಖಾರಿ - ಏಕ**
ಆಡುತಾಡುತ್ತ ಬಂದನಂದು | ವರದೈತ್ಯಲಲಾಮ |
ನೋಡೆ ಸಂಭ್ರಮಿಸೆ ಖೂಳನಂದು ||
ಆಡುವ ಮೃಗಗಳ | ಕಾಡಿಸಿ ಪೀಡಿಸಿ |
ಹೂಡುತ ಬಾಣವ ಕ್ರೀಡಿಸೆ ಮುದದಿಂ | ದಾಡುತಾಡುತ್ತಾ || ೧ ||

ಹರಿಣ ಶಾರ್ದೂಲ ಕಾಡ್ಕೋಣಗಳು | ಹುಲಿ ಕರಡಿ ಸಿಂಹ |
ಶರಭ ಭಲ್ಲೂಕ ಚಿರತೆ ಸಾಲು ||
ಪರಿಪರಿ ಮೃಗಗಳ | ತರಿಯುತ ವನದಲಿ |
ದುರುಳನು ಮೆರೆದನು ರವಿತೇಜದೊಳು | ಆಡುತಾಡುತ್ತ || ೨ || [೧೦೬]

**ಸೌರಾಷ್ಟ್ರ - ತ್ರಿವುಡೆ**
ಚಂದ್ರಮುಖಿ ಗುಣರನ್ನೆ ಮೋಹಿನಿ |
ಸುಂದರಾನನೆ ಚಂದ್ರಮತಿ ಮಯ |
ನಂದನೆಯು ವನಕೇಳಿಗೈತರೆ | ಚಂದವೇನು || ೧ || [೧೦೭]

**ತೋಡಿ - ರೂಪಕ**
ಬನ್ನಿ ಬನ್ನಿ ಸಖಿಯರೀಗ ವನದ ಕೇಳಿಗೆ |
ಬಣ್ಣ ಬಣ್ಣ ಸುಮಗಳಿರುವ ನಮ್ಮ ಕಾಡಿಗೆ ||
ಕನ್ಯಾಮಣಿಗಳೆದ್ದು ಬನ್ನಿ ಮುದದಿ ಸಾಗುವ |
ಹಣ್ಣುಗಳನು ಕೊಯ್ದು ನಾವು ರುಚಿಯ ಸವಿಯುವಾ || ೧ ||

ಮಂದಗಾಳಿ ಮಧುರ ಬೆಳಕು ತನುವ ಸೋಂಕಲು |
ಚಂದವಾದ ಹೂವು ಬಳ್ಳಿ ಸ್ಪರ್ಶ ಕಾಣಲು ||
ಅಂದವೇನು ಸುಮದ ಮಧುರ ರಮ್ಯ ಪರಿಮಳ |
ಸುಂದರಿಯರೆ ಹಿತವು ನಮಗೆ ಮುಡಿಯೆ ಸುಮಗಳ || ೨ ||

ಮಲ್ಲಿ ಜಾಜಿ ಕುಸುಮ ನೋಡೆಯಲ್ಲಿ ಕೇದಗೆ |
ಇಲ್ಲಿ ನೋಡೆ ಶಂಖಪುಷ್ಪ ಚೆಲ್ವ ಸಂಪಗೆ ||
ವಲ್ಲಭಾ ಶ್ರೀಹರಿಯ ಪೂಜೆಗಿಲ್ಲ ಸುಮಗಳು |
ಎಲ್ಲಾ ಬನ್ನಿ ಕೊಯ್ವ ಮುದದಿ ಬಲ್ಲ ಹೂಗಳು || ೩ || [೧೧೦]

**ಭಾಮಿನಿ**
ಚಂದ್ರಮತಿ ಮಯತನುಜೆ ಸಖಿಯರ |
ವೃಂದವನು ನೆರಹಿಸುತ ಸುಮಗಳ |
ಚಂದದಲಿ ಕೊಯ್ಯುತ್ತ ಮೆರೆದಿರೆ ದೂರದೊಳು ಖಳನು ||
ಕುಂದಕುಟ್ಮಲರದನೆ ಮೋಹಿನಿ |
ಇಂದ್ರಸತಿ ಶಚಿಯನ್ನೆ ಮೀರುವ |
ಸುಂದರಾಂಗಿಯ ರೂಪಕಾ ಹಯಗ್ರೀವ ಬೆರಗಾಗಿ || ೧ || [೧೧೧]

**ಯಮನ್‌ಕಲ್ಯಾಣಿ - ಅಷ್ಟ**

ಯಾರಮ್ಮ ಅಮಮಾ ಈ ಸುರಸುಂದರಿ | ನೋಡೆ |
ಮಾರಸತಿಯ ಪೋಲ್ವ ಕನಕಾಂಬರಿ ||
ಭೂರಮೆ ಆ ಶಚಿ ಬಂದಳೇನೋ | ಅಲ್ಲ |
ಮಾರವೈರಿಯ ಸತಿಯೀಕೆಯೇನೊ || ೧ ||

ಕಂಬುಕಂಠಿನಿ ನಾರಿ ಚಂದ್ರಾನನೆ | ನೋಡೆ |
ಅಂಬರವಿಳಿದ ತುಂಬಿದ ಯೌವನೆ ||
ಕುಂಭಕುಚೆಯ ನಾರಿ ವಯ್ಯಾರಿ | ಮನ |
ದುಂಬಿ ಮೋಹಿಪಳಲ್ಲ ಮದನಾರಿ || ೨ ||

ಯಾರಾದರೇನಂತೆ ಈ ಬೆಡಗಿ | ಕೇಳ್ವೆ |
ಸೇರಿ ಸುಖಿಸುವಂಥ ಕ್ಷಣಕಾಗಿ ||
ಕೀರವಾಣಿಯ ಮಾತನಾಡಿಸುವೆ | ದಯ |
ತೋರುವಳೆನಗೆಯೀ ಸುರಚೆಲುವೆ || ೩ || [೧೧೪]

**ಕಲ್ಯಾಣಿ - ಆದಿ**

ನಾರಿಮಣಿಯೆ ಯಾರೆ ನೀನು |
ಸೇರಿಕೊಂಡೀ ಸಖಿ ಸಹಿತಲೆ |
ತೋರುವ ಯೀ ವನಕೆ ಬಂದಾ | ಕಾರಣವೇನು || ೧ ||

ಎನ್ನ ಕೇಳ್ವ ಚೆಲುವ ಯಾರು |
ನಿನ್ನ ಊರು ದೇಶವೇನು |
ಘನ್ನಮಹಿಮನಂತೆ ತೋರ್ಪೆ | ನಿನ್ನ ಪರಿಚಯ || ೨ ||

ದಾನವೇಂದ್ರ ನಾನು ಮೆರೆವ |
ಶೋಣಿತಾಪುರದಧಿಪನಿಪ್ಪೆ |
ಕ್ಷೋಣಿಯೊಳು ಹಯಗ್ರೀವ ನಾನೇ | ಜಾಣೆ ಕೇಳ್ವುದು || ೩ ||

ಕೋವಿದಾ ಮಯಶಿಲ್ಪಿ ತನುಜೆ |
ಭೂವಲಯದೊಳು ಚಂದ್ರಮತಿಯು |
ಹೂವ ಕೊಯ್ವ ಕಾರ್ಯಕಾಗಿ | ಸಾರಿ ಬಂದೆನು || ೪ ||

ನಮ್ಮ ಮಯನ ತನುಜೆಯೇನೇ |
ಹೆಮ್ಮೆಯಾಯ್ತು ನನ್ನ ವರಿಸು |
ಸನ್ಮತದೊಳು ಮೆರೆಯಿಸುವೆನು | ನಿನ್ನ ಕೋಮಲೆ || ೫ ||

ನನ್ನ ಪಿತನ ಕರೆಸಿ ಕೇಳು |
ನನ್ನ ಅಭ್ಯಂತರವದಿಲ್ಲ |
ನಿನ್ನ ವರಿಪೆನೆನ್ನ ಪಿತನು | ಮನ್ನಿಸುತ್ತಿರೆ || ೬ || [೧೨೦]

**ಭಾಮಿನಿ**

ವನಿತೆ ನುಡಿದಾ ಪರಿಗೆ ಖಳಪತಿ |
ಮನದಿ ಹರುಷವನಾಂತು ತರುಣಿಯ |
ಮನದ ವಾಂಛಿತವರಿತು ಕರೆಸಲು ಶಿಲ್ಪಿ ಮಯನನ್ನು ||
ಕ್ಷಣದೊಳೈತಂದಾಗ ಒಪ್ಪಿಗೆ |
ಸನುಮತದಿ ಕೊಟ್ಟಿರಲು ಬಳಿಕಾ |
ವಿನುತ ಪಾಣಿಗ್ರಹಣ ನಡೆಯಲು ಬಹಳ ವಿಭವದಲಿ || ೧ || [೧೨೧]

**ಸಾಂಗತ್ಯ - ರೂಪಕ**

ಖಳರುಪಟಳ ಕಂಡು | ಕಳವಳಿಸಿ ಸುರಪಾಲ |
ಸಲಹುವರಾರಿಹರೆನುತ ||
ಬಲಹೀನರಾದೆವು | ವರಬಲದಿಂದಲೆ |
ನೆಲೆ ತಪ್ಪಿತೆಂದು ಶೋಕಿಸುತಾ || ೧ ||

ಸತ್ಯಲೋಕಕೆ ಪೋಗಿ | ಬ್ರಹ್ಮದೇವನ ಕೂಡೆ |
ವೃತ್ತಾಂತವರುಹಬೇಕೆನುತ ||
ವೃತ್ರಾರಿಯಂದಿಲಿ | ಸುರರ ನೆರಹಿಕೊಂಡು |
ಮತ್ತೆ ಬಂದರೆ ವಿಧಿಯೆಡೆಗೆ || ೨ ||

ಸರಸಿಜಾಸನ ದೇವ | ದುರಿತನಿವಾರಕ |
ಪರಿಹರಿಸು ನಮ್ಮ ಸಂಕಷ್ಟ ||
ದುರುಳದಾನವರು ಸುರ | ಪುರಕೈದಿ ತಂದಿರೆ |
ಪರಿಪರಿಯುಪಟಳ ಕಷ್ಟ || ೩ ||

ಮುತ್ತಿ ನಾಕವ ಗೆಲಿ | ದಟ್ಟೋಡಿಸಲು ನಮ್ಮ |
ಸತ್ಯಲೋಕಕೆ ಬಂದೆವಯ್ಯಾ ||
ಧೂರ್ತರಟ್ಟುಳಿಯಿಂದ | ಪರಿಹರಿಸು ನಮ್ಮನ್ನ |
ಅರ್ತಿಯಿಂ ಪೊರೆಯಯ್ಯ ಜೀಯಾ || ೪ || [೧೨೫]

**ಭಾಮಿನಿ**

ಅನಿಮಿಷರು ಗೋಳಿಡಲು ಕಮಲಜ |
ಅನುನಯದಿ ಸಂತೈಸಿ ಪೇಳಿದ |
ದನುಜರಟ್ಟುಳಿಯರಿತೆ ಖಳ ತಾ ದೇವಿ ವರಬಲದಿ ||
ಜನಪದದಿ ಗೆಲಲಸದಳವು ನಾವ್ |
ಚಿನುಮಯನ ಮರೆಹೋಗಬೇಕೆಂ |
ದೆನುತ ಸುರಸಂದಣಿಯ ಕೂಡಿಸಿ ಹರಿಯ ಬಳಿಗೈದೆ || ೧ || ][೧೨೬]

**ಕೇದಾರಗೌಳ - ಅಷ್ಟ**

ಒಂದುಸಾವಿರ ವರ್ಷ | ಇಂದಿರಾಧವ ಖಳ |
ವೃಂದದೊಡನೆ ಕಾದುತಾ ||
ಅಂದು ಬಳಲುತಿದ್ದು | ಹೊಂದಿದಾ ದಣಿವಿಗೆ |
ಚಂದದಿ ನೀಗುವರೆ || ೧ ||

ಯೋಗನಿದ್ರೆಯ ಮಾಡಿ | ಆಗಿದ್ದ ದಣಿವನ್ನು |
ನೀಗಿಸಬೇಕೆನ್ನುತ ||
ನಾಗಶಯನನಂದು | ಪೊರವಂಟ ಪರಿಶುದ್ಧ |
ಯೋಗ್ಯ ಸ್ಥಳವನರಸುತ || ೨ || [೧೨೭]

**ವಾರ್ಧಕ**

ಧರಣಿಯೊಳ್ ಹಳ್ಳದಿಣ್ಣೆಗಳಿರದ ಸಮತಟ್ಟು |
ಪರಿಶುದ್ಧ ಸ್ಥಳ ಕಂಡು ಹರಿಯು ಹೆದೆಯೇರಿಸಿದ |
ಪರಮಧನುಸಿಗೆ ತನ್ನ ಶಿರವನಾಧರಿಸಿ ತಾ ವಿರಮಿಸಲು ದಣಿವಿನಿಂದ ||
ಪರಿಕಿಸುತ ಕಮಲಜನು ಸುರಪನೊಡನೆಂದನಾ |
ಮುರಮಥನ ಯೋಗನಿದ್ರೆಯನಾಂತ ಚೋದಿಗವು |
ಅರುಹಲೆಂತೀಗ ನಮ್ಮಯ ಕಷ್ಟ ವಿವರಗಳ ನಿದ್ರಾಭಂಗವು ಸಲ್ಲದು || ೧ || [೧೨೮]

**ಕೇದಾರಗೌಳ - ಝಂಪೆ**

ನಮ್ರಿ ಹುಳವನು ಸೃಷ್ಟಿಸೆ | ಆ ಕ್ಷಣದಿ |
ಬ್ರಹ್ಮದೇವಗೆ ವಂದಿಸೆ ||
ನಮ್ಮ ಸೃಷ್ಟಿಗೆ ಕಾರಣ | ಪೇಳಯ್ಯ |
ರಮ್ಯಮೂರ್ತಿಯೆ ಪಾವನ || ೧ ||

ಗೆದ್ದಲಿನ ಕ್ರಿಮಿಯೆ ಕೇಳು | ನೀನೀಗ |
ಯೆದ್ದಿರುವೆ ಭೂತಳದೊಳು ||
ಶುದ್ಧ ಮನದೊಳು ಹರಿಯನೂ | ನಿದ್ರೆಯಿಂ |
ದೆದ್ದೇಳಿಸಲು ನಿನ್ನನೂ || ೨ ||

ಸೃಷ್ಟಿಸಿದೆಯೆನುವ ವಿಧಿಗೆ | ಆ ಕ್ರಿಮಿಯು |
ತಟ್ಟನೆರಗುತ ಬ್ರಹ್ಮಗೆ ||
ಕಷ್ಟಸಾಧ್ಯವು ಬ್ರಹ್ಮನೆ | ಇದರಿಂದ |
ತಟ್ಟುವುದು ಪಾಪವೆನಗೆ || ೩ ||

ಸುರರ ದುರಿತವ ನೀಗಿಸೆ | ಹರಿಯನೆ |
ಚ್ಚರಿಪ ಕಜ್ಜವನೀಕ್ಷಿಸೆ ||
ಬರದು ದುರಿತವು ಗೆದ್ದಲೆ | ತ್ವರಿತದೊಳು |
ಕೊರೆದುಬಿಡು | ಬುಡವ ಕೇಳೆ || ೪ ||

ಪತಿಪತ್ನಿ ಮಧ್ಯೆ ಭೇದ | ಮಹಪಾಪ |
ಸುತ ಮಾತೆ ನಡುವೆ ಕ್ರೋಧ ||
ಹಿತದಿ ತಂದಿಡುವ ಜನಕೆ | ಪಾತಕವು |
ಹಿತವಿಲ್ಲಯೀ ಕೋರಿಕೆ || ೫ || [೧೩೪]

**ವಾರ್ಧಕ**

ವರನಮ್ರಿಹುಳ ಕೇಳು ಲೋಕಕಲ್ಯಾಣವಿದು |
ಹರಿಯನೆಬ್ಬಿಸೆ ನೀನು ಕೊರೆದರೀ ಶರಬುಡವ |
ಧರೆಯೊಳಗೆ ಯಜ್ಞಯಾಗಾದಿಗಳ ಕುಂಡದಾ ಹೊರಸುತ್ತ ಹವಿರ್ಭಾಗವು ||
ಧರೆಗೆ ಬೀಳಲು ನೀನು ಭಕ್ಷಿಪುದು ವರವಿತ್ತೆ |
ಬರಿದೆ ಸಂಶಯ ಬೇಡ ಶರಬುಡವ ಕೊರೆದುಬಿಡು |
ತ್ವರಿತದಿಂದೆನಲಾಗ ಸಂತಸದೊಳಾ ಕ್ರಿಮಿಯು ಶರಬುಡವ ಕೊರೆಯುತಿರಲು || ೧ || [೧೩೫]

**ಕಾಂಬೋಧಿ - ಝಂಪೆ**

ಶರಬುಡವ ತಿಂದು ಬಿಡೆ | ವರಕ್ರಿಮಿಯು ಧನುವಿನಾ |
ಸ್ಥಿರತೆ ತಪ್ಪಿದರೆ ಶರ ತುದಿಯು ||
ಹರಿಶಿರವ ಕತ್ತರಿಸಿ | ಹರಿಸಿಬಿಡೆ ಬಲುದೂರ |
ವರಲವಣಶರಧಿಯೊಳು ಬೀಳೆ || ೧ ||

ಬಿರಿಯಿತೈ ಬ್ರಹ್ಮಾಂಡ | ಪರ್ವತವು ಕಂಪಿಸಲು |
ಸುರಿಯೆ ಉಲ್ಕಾಪಾತ ನಭದಿ ||
ವರಸೂರ್ಯ ಚಂದ್ರರುಗ | ಳಡಗಿದರೆ ಭೀತಿಗಾ |
ಶರಧಿಯುಕ್ಕೇರಿತಾ ಕ್ಷಣದಿ || ೨ ||

ಹರಬ್ರಹ್ಮಸುರರೆಲ್ಲ | ಗೋಳಿಟ್ಟರಾಕ್ಷಣದಿ |
ಹರಿಶಿರದ ಭೇದನವ ಕಂಡು ||
ಪೊರೆವರಾರೆಮ್ಮ ಮುಂ | ದಿನ ಹಾದಿಯೇನಿದಕೆ |
ದುರಿತವನು ನೀಗಬೇಕೆನುತ || ೩ || [೧೩೮]

**ಭಾಮಿನಿ**
ವೇಳೆ ಕಳೆಯದೆ ಸ್ಮರಿಸೆ ದೇವಿಯ |
ಕೇಳಿಸಿತು ನಭವಾಣಿ ಭಕ್ತರೆ |
ತಾಳಿ ಧೈರ್ಯವ ಧೃತಿಗೆಡದಿರಿನ್ನೊಂದೆ ಒಳಿತಿಹುದು ||
ಲೀಲೆಯೊಳು ವರತ್ವಷ್ಟ್ರ ಬ್ರಹ್ಮಗೆ |
ಪೇಳಿ ತುರಗದ ಶಿರವ ಜೋಡಿಸೆ |
ಶ್ರೀಲಲಾಮನು ಎದ್ದು ಬರುವನು ದೈತ್ಯವಧೆಗಾಗಿ || ೧ || [೧೩೯]

**ಕೇದಾರಗೌಳ - ಅಷ್ಟ**
ತ್ವಷ್ಟ್ರ ಬ್ರಹ್ಮನು ಬಂದು | ಶ್ರೇಷ್ಠ ತುರಗ ಶಿರ |
ಅಷ್ಟರೊಳಗೆ ಸೇರಿಸೆ ||
ವಿಷ್ಣುಕಾಯಕೆ ಸೇರ | ಲಚ್ಚರಿಯೇನೆಂಬೆ |
ವಿಷ್ಣುವಿನವತಾರವ || ೧ ||

ಭಾವಜಪಿತ ಹಯ | ಗ್ರೀವನಾಗಿಯೆ ನಿಂತು |
ದೇವಿ ದಯದೊಳಂದಿಲಿ ||
ದೇವತೆಗಳು ಮಹ | ದೇವನ ಸ್ತುತಿಸಲು |
ಈ ವಿಧ ಭಕುತಿಯಲಿ || ೨ || [೧೪೧]

**ಮಧ್ಯಮಾವತಿ - ಅಷ್ಟ**
ದೇವರದೇವ ಹೇ ದೇವ ಹಯಗ್ರೀವ |
ಭಾವಜಪಿತ ನೋಡು ದೇವೀಪ್ರಭಾವ ||
ದೇವತೆಗಳ ಕಷ್ಟ ನೀಗಿಸಲೆಂದೆ |
ಈ ವಿಧ ರೂಪವ ತಾಳಿದೆ ತಂದೆ || ೧ ||

ದುರುಳ ದೈತ್ಯನ ಕೊಂದು ನಮ್ಮನುದ್ಧರಿಸು |
ವರನಾಕಲೋಕವ ನಮಗೀಗ ಕೊಡಿಸು ||
ಧರೆಗೆ ಕಂಟಕನಾಗಿ ಮೆರೆಯುತ್ತಲಿಹನು |
ತರಿದು ಸಂತಸ ಕೊಡು ಸುರರಿಂಗೆ ನೀನು || ೨ || [೧೪೩]

**ಸೌರಾಷ್ಟ್ರ - ತ್ರಿವುಡೆ**
ಸುರರ ನುಡಿಯನು ಕೇಳಿ ರೋಷದಿ |
ಸರಸಿಜಾಕ್ಷನು ನುಡಿದ ಶೋಣಿತ |
ಪುರಕೆ ತೆರಳುತ ಖೂಳದೈತ್ಯನ | ತರಿದು ಬರುವೆ || ೧ ||

ಬರುವುದೆನ್ನೊಡನೆನುತ ಸುರಪಡೆ |
ವೆರಸಿ ಶೋಣಿತಪುರಕೆ ಮುತ್ತಲು |
ದುರುಳ ಭಾನುಕನನ್ನು ಧುರದೊಳು | ವರುಣ ತಡೆದಾ || ೨ || [೧೪೫]

**ಭೈರವಿ - ಏಕ**
ನಿಲ್ಲೆಲೊ ದುರುಳನೆ ಧುರಕೆ | ನೀ |
ನೆಲ್ಲಿಗೆ ಪೋಗುವೆ ಜೋಕೆ ||
ಕೊಲ್ಲಲು ನಾ ಬಂದಿರುವೆ | ಧುರ |
ಗೆಲ್ಲೆಲೊ ನೀನಿಂದಿರುವೆ || ೧ ||

ಹಿಂದಕೆ ಕಾದಿದ ಪರಿಯ | ಆ |
ಚಂದವ ನೀ ಮರೆತಿಹೆಯಾ ||
ಕೊಂದಪೆಯೀಗಲೆ ನಿನ್ನಾ | ಕ್ಷಣ |
ನಿಂದಿರು ತೋರಿಪೆ ಯಮನಾ || ೨ ||

ಬಿಡುಬಿಡು ಬಡಿವಾರಗಳ | ನೀ |
ಕೊಡು ಧುರ ಮರಣದ ಕಾಲ ||
ಪೊಡವಿಯೊಳಿಂದಿಗೆ ಬಂತು | ನಾ |
ದೃಢದೊಳು ಕೊಡಿಸುವೆಯಿಂತು || ೩ ||

ಬಾಣವ ಬಿಡುತಲೆ ವರುಣ | ಆ |
ಚೂಣಿಗೆ ಬಂದಾ ಖಳನಾ ||
ತ್ರಾಣದಿ ಗೆಲಿದಾಕ್ಷಣದಿ | ಅದ |
ಕಾಣುತ ಖಂಡಕ ಭರದಿ || ೪ || [೧೪೯]

**ಭೈರವಿ - ಏಕ**
ಧುರದೊಳು ಅಗ್ನಿಯ | ದುರುಳನು ಖಂಡಕ |
ಭರದೊಳು ತಡೆದೆಂದಾ ||
ಮರೆಯದ ಪಾತವ | ಕಲಿಸುವೆಯೀಗಲೆ |
ಮರುಳನೆ ನಿನಗೆಂದಾ || ೧ ||

ಬಲ್ಲೆನು ನಿನ್ನಯ | ಮಲ್ಲ ಪರಾಕ್ರಮ |
ವೆಲ್ಲವ ತಿಳಿದಿಹೆನೊ ||
ಕೊಲ್ಲಲು ನಿನ್ನಯ | ಕಾಯುವರಾರೈ |
ಗೆಲ್ಲುವೆಯೆಲ್ಲವನು || ೨ ||

ಜ್ಯೇಷ್ಠರು ನಾವಿರೆ | ಶ್ರೇಷ್ಠರು ವರಸುರ |
ಪಟ್ಟವು ದೈತ್ಯರಿಗೆ ||
ಸೃಷ್ಟಿಯೊಳು ಸೇರಿರೆ | ಬಿಟ್ಟುಕೊಡಿರಿ ಹಿರಿ |
ಪಟ್ಟಕೆ ಮನ್ನಣೆಯ || ೩ ||

ಶತಯಾಗದ ಫಲ | ನಾಕವು ಸುರರಿಗೆ |
ಹಿತದೊಳು ಸೇರಿದರೆ ||
ಮತಿಹೀನರ ತೆರ | ನುಡಿಯುವೆ ಹಿರಿತನ |
ಕತೆ ಬೇಡವೊ ನಮಗೆ || ೪ || [೧೫೩]

**ಪಂಚಾಗತಿ - ಮಟ್ಟೆ**
ದುರುಳರೆಲ್ಲ ಸೋತು ಓಡೆ |
ದುರುಳ ಹಯಗ್ರೀವನಾಗ |
ಸುರಪನನ್ನು ತಡೆದು ಧುರದಿ | ಶರವ ಸುರಿದಿರೆ || ೧ ||

ಬಂದ ಶರಗಳನ್ನು ತರಿದು |
ಮಂದಮತಿಗೆ ನುಡಿದ ಸುರಪ |
ಬಂದೆಯೇನೊ ನಾಕ ಪಡೆಯೆ | ಭಂಡದಾನವ || ೨ ||

ಅಷ್ಟು ಸುಲಭವಲ್ಲ ನಿನಗೆ |
ಕಷ್ಟಕಾರ್ಯ ಧುರದ ಗೆಲುವು |
ಭ್ರಷ್ಟ ನಿನ್ನ ಕೊಂದು ನಾಕ | ಪಟ್ಟ ಪಡೆವೆನು || ೩ ||

ಬರಿದೆ ಮಾತು ಬೇಡ ಈಗ |
ಧುರದಿ ತೋರಿಸಯ್ಯ ಶೌರ್ಯ |
ಸುರಪನೊಳಗೆ ಎನುತ ಶರದ | ಮಳೆಯ ಕರೆದನು || ೪ || [೧೫೭]

**ಕಾಂಭೋದಿ - ಝಂಪೆ**
ಇತ್ತ ಸುರಪನ ತಡೆದು | ಧೂರ್ತ ಹಯಗ್ರೀವನನು |
ಮತ್ತೆಯೆದುರಿಸುತ ಹಯವದನ ||
ದೈತ್ಯಾಗ್ರಣಿಯೆ ನಿಲ್ಲು | ಯೆತ್ತ ಪೋಗುವೆ ಧುರದಿ |
ಮೃತ್ಯುರೂಪದಿ ಬಂದೆ ನಾನು || ೧ ||

ತುರಗವದನದ ಪೋರ | ಧುರಕೆ ಬಂದ್ಯೆ ನೀನು |
ಬರಿದೆ ಸಾಯಲು ಬೇಡ ನಿನ್ನ ||
ಧರೆಯೊಳಗೆ ಬಿಟ್ಟಿರುವೆ | ಬದುಕಿಕೊಂಡಿರು ಪೋಗು |
ತರವಲ್ಲ ಧುರವು ಯೆನ್ನೊಳಗೆ || ೨ ||

ಮಂದಮತಿ ನಿನ್ನನ್ನೆ | ಕೊಂದು ಕೆಡಹಲು ನಾನು |
ಬಂದಿರಲು ದೇವಿ ದಯದಿಂದ ||
ಸಂದೇಹ ಬೇಡವೆನು | ತಂದು ಶರಮಳೆ ಕರೆಯೆ |
ಅಂದು ಹಯಗ್ರೀವ ತಾ ಕನಲಿ || ೩ ||

ಬಿಟ್ಟ ಶರಗಳ ತರಿದು | ದುಷ್ಟ ಗುಡುಗುಡಿಸುತ್ತ |
ಪುಟ್ಟಿದೆಯ ಹಯವದನನಾಗಿ ||
ಕುಟ್ಟಿ ಕೆಡಹುವೆನೆಂದು | ಬಿಟ್ಟರಾ ಶರಗಳನು |
ಘಟ್ಟನೆ ಮುರಿದ ಹಯಗ್ರೀವ || ೪ || [೧೬೧]

**ಭಾಮಿನಿ**
ದೇವದುಂದುಭಿ ಮೊಳಗಲಾಕ್ಷಣ |
ಶ್ರೀವರನು ಸಂಗ್ರಾಮದೊಳು ಹಯ |
ಗ್ರೀವ ದೈತ್ಯನ ಕೊಂದು ಕೆಡಹಲು ರಣದ ಮಧ್ಯದೊಳು ||
ಭಾವಶುದ್ಧದಿ ಬ್ರಹ್ಮ ಸುರಪರು |
ದೇವಿಯನು ಸಂಸ್ತುತಿಸೆ ಭಕ್ತಿಯೊಳ್ |
ಪಾವನೆಯು ಶ್ರೀದುರ್ಗೆ ಮೆಯ್ದೋರಿದಳು ಸಂಭ್ರಮದಿ || ೧ || [೧೬೨]

**ಬೇಗಡೆ - ಅಷ್ಟ**
ಅಷ್ಟಪಾಣಿಯು ಧುರದಿ ಮೆಯ್ದೋರೆ | ಹಯಗ್ರೀವ ವರ ಪರ |
ಮೇಷ್ಠಿ ಸುರಪರು ದೇವಿಗೆರಗಿದರೆ ||
ದಿಟ್ಟಿಸುತ ಶರಣರನು ನುಡಿದಳು |
ದುಷ್ಟಮಥನವದಾಯ್ತು ಹರಿಯೆ |
ಸೃಷ್ಟಿಗಾಯ್ತು ಸುಭಿಕ್ಷಕಾಲವು |
ಕಟ್ಟ ಕಡೆಗೆಯು ಪ್ರಾಪ್ತಿಯಾಯಿತು || ೧ ||

ಚಿತ್ರಜಯ್ಯನ ಪಿತನೆ ನೀನೀಗ | ಧರೆಯೊಳಗೆಯೆತ್ತಿರೆ |
ಹತ್ತು ಅವತಾರಗಳ ಹೊರತೀಗ ||
ಪೃಥ್ವಿಯಲಿ ಪರಿಗಣಿಸಲೆಲ್ಲ ಮ |
ಹತ್ತರದ ಅವತಾರವಾಗಿಯೆ |
ಹತ್ತಿರದ ಕಲಿಯುಗದಿ ಭಾರ್ಗವ |
ಸೃಷ್ಟಿಯೊಳು ವರ ರಜತಪೀಠದಿ || ೨ ||

ಎರಡು ಸೂಕರ ರೂಪವಾಂತಿರುವೆ | ವಿಭಿನ್ನ ಕಾಲಕೆ |
ಧರೆಯೊಳಗೆ ನೆನೆಪಿಸಲು ಶ್ರೀಹರಿಯೆ ||
ಕರೆಯಲಿಕೆ ವರ ಭೂವರಾಹಕ |
ಪರಮಪೂಜೆಯಗೊಳ್ಳುತಿರೆ ಶ್ರೀ |
ಹರಿಯೆ ವರ ಸಂಕಲ್ಪಕಾಲಕೆ |
ಬರಲಿ ಶ್ವೇತವರಾಹಕಲ್ಪವು || ೩ ||

ಪಿತ್ತಕಫವಾತಗಳು ತ್ರೈದೋಷ | ವರ ಆಯುರ್ವೇದದಿ |
ಮತ್ತೆ ಸಮಸ್ಥಿತಿ ಮೀರೆ ತನುದೋಷ ||
ಸತ್ವ ರಾಜಸ ತಮಗಳಾ ಸಮ |
ಸ್ಥಿತಿಯ ಮೀರಿದರದುವೆ ಹಾನಿಯು |
ಚಿತ್ರಜಯ್ಯನ ಪಿತಗೆ ಲಕ್ಷ್ಮಿಗೆ |
ಮತ್ತೆಯಾ ವಿಧಾತನಿಗು ಸಹ || ೪ ||

ಮೂರು ಗುಣಗಳ ಸಮಸ್ಥಿತಿಯೊಳಿಡಲು | ತ್ರಿಕಣ್ಣೇಶಿಯಾಗಿಯೆ |
ಧಾರುಣಿಯೊಳು ಹೊದ್ರಾಳಿ ಕ್ಷೇತ್ರದೊಳು ||
ಮೂರು ಲೋಕವ ಪಾಲಿಪೆನು ವರ |
ಚಾರುಲಿಂಗದ ರೂಪ ಧರಿಸುತ |
ಸೇರಿಕೊಂಬೆನು ದುರ್ಗೆಯಾಗಿಯೆ |
ಸೇರಿ ಭಜಿಸಿರಿ ಯೆನ್ನನಲ್ಲಿಯೆ || ೫ || [೧೬೭]

**ಕಂದ**

ಎಂದರುಹುತ ದೇವಿಯು ತಾ |
ಹೊಂದಲಂತರ್ಧಾನವ ಕಾಣುತ ಜಲಜನಾಭಂ ||
ವೃಂದಾರಕರ ಜಡಜಭವ |
ಸಂದಣಿಗೆ ಭಯವನು ತಾ ಕರುಣಿಸುತಲಾಗಲ್ || ೧ || [೧೬೮]

**ಸೌರಾಷ್ಟ್ರ - ತ್ರಿವುಡೆ**

ಜಡಜಭವ ಸುರಪಾಲ ಮುಖ್ಯರೆ |
ಕಡಿದುರುಳಿಸಿ ಹಯಗ್ರೀವ ದೈತ್ಯನ |
ದೃಢದಿ ನಾಕವನಿತ್ತೆ ನಿಮಗಾ | ದೇವಿ ದಯದಿ || ೧ ||

ಪರಶುರಾಮನ ಸೃಷ್ಟಿಯೊಳಗಾ |
ಮೆರೆವ ಪಾವನ ರಜತಪೀಠದಿ |
ಹರುಷದಿಂದಲಿ ನೆಲೆಸಿ ನಿಮ್ಮನು | ಪೊರೆವೆನೆಂದ || ೨ || [೧೭೦]

**ಭಾಮಿನಿ**
ಆದಿ ಮಾಯೆಯ ಕಥನವಿರಲಿದ |
ಸಾದರದಿ ವರ ಯಕ್ಷಗಾನದಿ |
ಮೋದದೊಳು ನಾ ಬರೆದೆನಿಂದಿಲಿ ಅಗರಿ ಭಾಸ್ಕರನು ||
ಮೇದಿನೀಸುರ ಭಕ್ತಿಭಾವದಿ |
ವೇದನುತೆಯಳ ಪಾದಚರಣದಿ |
ಈ ದಿನದಿ ನಾನಿಟ್ಟೆ ಪ್ರಾಜ್ಞರು ಮೆರೆಸಲೀ ಕೃತಿಯ || ೧ || [೧೭೧]

**ಮಂಗಲ ಪದ್ಯ**
ಮಂಗಲ ಜಯ ಹಯಗ್ರೀವನಿಗೆ | ಜಯ |
ಮಂಗಲ ಮೂಜಗಪೂಜಿತಗೆ ||
ಮಂಗಲ ವರಮಹಲಕ್ಷ್ಮೀದೇವಿಗೆ | ಜಯ |
ಮಂಗಲ ಮಣಿಪುರವಾಸಿನಿಗೆ || ೧ ||

ರಜತಪೀಠದಲಿ ನಿಂತವಗೆ | ಆ |
ಭಜಕಜನರ ಸುಪ್ರೇಮನಿಗೆ ||
ಗಜಮುಖವಂದ್ಯಗೆ | ಭುಜಗಭೂಷಣಗೆ |
ರಜತಾದ್ರಿಯ ಪುರವಾಸನಿಗೆ |
ಮಂಗಲಂ ಜಯ ಮಂಗಲಂ || ೨ || [೧೭೩]

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು :** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು :** ಹೇರಂಜೆ ಕೃಷ್ಣ ಭಟ್ಟ, ಸೇವಧಿ ಪ್ರಕಾಶನ

**ಪ್ರಸಂಗ ಪ್ರತಿ ಆಧಾರ :** ಪ್ರಸಂಗಕರ್ತರ ಮೂಲ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು :** ಅಗರಿ ಭಾಸ್ಕರ ರಾವ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ :** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಬರವಣಿಗೆ :** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ವಿನ್ಯಾಸ :** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ತಿದ್ದುಪಡಿ :** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ :** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ